**ANDOLANNA (KANNADA DAILY)**

Date: Wednesday, February 12, 2014 | Page: 5

Edition: Mysore | Language: Kannada

# ಆರ್ಥಿಕತೆಗೆ ಆವಿಷ್ಕಾರ ಅಗತ್ಯ

## ಎಸ್‌ಡಿಎಂ-ಐಎಂಡಿ ವಾರ್ಷಿಕ ಭಾಷಣ ಮಾಲಿಕೆಯಲ್ಲಿ ಡಾ. ಮಷೇಲ್ಕರ್

ಮೈಸೂರು,ಫೆ.೧೧–ಸ್ಪರ್ಧಾತ್ಮಕ ಮೂಲದಿಂದ ಅನಾವರಣಗೊಳ್ಳುವ ಆವಿಷ್ಕಾರಗಳು ಜನರ ಜೀವನ ಮಟ್ಟವನ್ನು ಸುಧಾರಿಸುವಂತಿರಬೇಕು ಎಂದು ಸಿಎಸ್‌ಐಆರ್ ಮಾಜಿ ನಿರ್ದೇಶಕ ಹಾಗೂ ಗ್ಲೋಬಲ್ ರಿಸರ್ಚ್ ಅಲೆಯನ್ಸ್ ಅಧ್ಯಕ್ಷ ಡಾ.ಆರ್.ಎ.ಮಷೇಲ್ಕರ್ ಅಭಿಪ್ರಾಯಪಟ್ಟರು.

ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಸಂಸ್ಥೆ (ಎಸ್‌ಡಿಎಂ–ಐಎಂಡಿ) ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ವಾರ್ಷಿಕ ಭಾಷಣ ಮಾಲಿಕೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದೇಶದ ಆರ್ಥಿಕತೆಯನ್ನು ಸುಧಾರಿಸಲು ಆವಿಷ್ಕಾರಗಳು ಅಗತ್ಯವಾಗಿದ್ದು, ಇದಕ್ಕಾಗಿ ಮಹತ್ವಾಕಾಂಕ್ಷೆ ಇರಿಸಿಕೊಳ್ಳಬೇಕು. ಆವಿಷ್ಕಾರ ಎಂಬ ಗುರಿ ತಲುಪಲು ಉನ್ನತ ಮಟ್ಟದ ಸ್ಫೂರ್ತಿ ಇರಬೇಕು. ಅದಕ್ಕೆ ನೂತನ ಪರಿಕಲ್ಪನೆ ಇರಬೇಕಾಗುತ್ತದೆ ಎಂದ ಅವರು, ಅದಕ್ಕೆ ತಕ್ಕ ಅಭ್ಯಾಸವನ್ನೂ ರೂಢಿಸಿಕೊಂಡು ವೇಗವನ್ನು ಕಾಪಾಡಿಕೊಳ್ಳುವುದು ಅತ್ಯಂತ ಅಗತ್ಯ ಎಂದು ಹೇಳಿದರು.



ಮೈಸೂರಿನ ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಸಂಸ್ಥೆ (ಎಸ್‌ಡಿಎಂ-ಐಎಂಡಿ) ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ವಾರ್ಷಿಕ ಭಾಷಣ ಮಾಲಿಕೆ ಕಾರ್ಯಕ್ರಮದಲ್ಲಿ ಗ್ಲೋಬಲ್ ರಿಸರ್ಚ್ ಅಲೈಯನ್ಸ್ ಅಧ್ಯಕ್ಷ ಡಾ.ಆರ್.ಎ.ಮಷೇಲ್ಕರ್ ಸಭಿಕರನ್ನು ಕುರಿತು ಮಾತನಾಡುತ್ತಿರುವುದು.

ಶಿಕ್ಷಣ ಮತ್ತು ಆವಿಷ್ಕಾರಗಳಿಂದ ಸುಧಾರಣೆ ತರಬಹುದು. ಹೊಸ ಪರಿಕಲ್ಪನೆ ಯಶಸ್ವಿಗೊಳಿಸಲು ಮುಂದಾಗಬೇಕು. ಆ ಹೊಸ ಪರಿಕಲ್ಪನೆಯನ್ನು ಯಶಸ್ವಿಗೊಳಿಸುವುದೇ ಆವಿಷ್ಕಾರವಾಗಿದೆ. ಜನರ ಕೈಗೆಟುಕುವ ಗುಣಮಟ್ಟದ ಸೇವೆಗಳನ್ನು ನೀಡುವಂತಾಗುವ ಆವಿಷ್ಕಾರಗಳು ಇಂದು ಅಗತ್ಯವಾಗಿದೆ ಎಂದರು.

ಆವಿಷ್ಕಾರದಿಂದ ಆರ್ಥಿಕತೆ ಹೆಚ್ಚುತ್ತದೆಯೇ ಎಂಬುದನ್ನು ಗಮನಿಸಿಕೊಳ್ಳುವುದು ಅಗತ್ಯ. ಇದೊಂದು ರೀತಿಯ ಸವಾಲು ಎಂದೇ ಹೇಳಬಹುದು. ನಮ್ಮ ಆವಿಷ್ಕಾರಗಳು ಬೆಳೆಯುತ್ತಿರುವ ನಮ್ಮ ಜನಸಂಖ್ಯೆಗೆ ಅನುಕೂಲ ಮಾಡಿಕೊಡುವಂತಿರಬೇಕು ಎಂದರಲ್ಲದೆ, ೨೦೨೦ರ ದಶಕವನ್ನು ಆವಿಷ್ಕಾರದ ವರ್ಷ ಎಂದು ಪ್ರಧಾನಮಂತ್ರಿಗಳು ಘೋಷಣೆ ಮಾಡಿದ್ದಾರೆ ಎಂದು ತಿಳಿಸಿದರು.

ಜಪಾನ್, ಯೂರೋಪ್ ಸೇರಿದಂತೆ ಹಲವು ಅಭಿವೃದ್ಧಿ ಹೊಂದಿದ ದೇಶಗಳು ಆವಿಷ್ಕಾರ ಎಂಬ ಬಗ್ಗೆ ಶಬ್ದಕೋಶವನ್ನೇ ತಯಾರು ಮಾಡಿಕೊಂಡಿವೆ. ಅದರಲ್ಲಿ ಮಿತವ್ಯಯ, ಒಳಗೊಳ್ಳುವಿಕೆ ಆವಿಷ್ಕಾರಗಳ ಬಗ್ಗೆ ತತ್ವಗಳನ್ನು ತಿಳಿಸಲಾಗಿದೆ ಎಂದು ವಿವರಿಸಿದ ಅವರು, ಇಂದಿನ ನಮ್ಮ ಆರ್ಥಿಕ ಸ್ಥಿತಿಯಲ್ಲಿ ಒಂದು ಕಡೆ ಹೆಚ್ಚುತ್ತಿರುವ ಆದಾಯ, ಮಹತ್ವಾಕಾಂಕ್ಷೆ ಕಂಡು ಬರುತ್ತಿದ್ದರೂ ಮತ್ತೊಂದು ಕಡೆ ಅಸಮಾನತೆ, ಸಾಮಾಜಿಕ ಹೊಂದಾಣಿಕೆ ಇಲ್ಲದಿರುವಿಕೆ ಸಮಸ್ಯೆಗಳು ಕಾಡುತ್ತಿವೆ ಎಂದು ವಿಷಾದಿಸಿದರು.

ಸಿಎಫ್‌ಟಿಆರ್‌ಐ ಮಾಜಿ ನಿರ್ದೇಶಕ ಡಾ.ವಿ.ಪ್ರಕಾಶ್, ಸಂಸ್ಥೆಯ ನಿರ್ದೇಶಕ ಎನ್.ಆರ್.ಪರಶುರಾಮ್, ಪಿಜಿಡಿಎಂ ಕಾರ್ಯಕ್ರಮದ ಮುಖ್ಯಸ್ಥೆ ಡಾ.ನೀತುಗಣಪತಿ ಮತ್ತಿತರರು ಹಾಜರಿದ್ದರು.